**ಮರು ಪ್ರಮಾಣೀಕರಿಸಲಾದ ದಿನಾಂಕ : 10.04.2026.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. T.K.U ವಕೀಲರಿಂದ :-**

ನಿಪಿ-21 ರಲ್ಲಿ ಇರುವ ಸಂಗತಿಗಳ ಅಂಶವು ನನಗೆ ತಿಳಿದಿರುತ್ತದೆ. ಯಾವ ಆಸ್ತಿಯು ಸಿಂಗ್ರಿನಂಜಪ್ಪ ಎಂಬುವವರಿಗೆ ಸೇರಿದ ಆಸ್ತಿ ಎಂದು ಗೊತ್ತಿರುತ್ತದೆ ಎಂದರೆ ಸರಿ. ಸದರಿ ಶಾಲೆಯು 1918 ನೇ ಇಸವಿಯಲ್ಲೇ ಪ್ರಾರಂಭಗೊಂಡಿರುತ್ತದೆ ಎಂಬ ವಿಷಯವು ನನಗೆ ತಿಳಿದಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರು ಬಂದು ಉದ್ಘಾಟನೆ ಮಾಡಿರುವ ಸಂಗತಿಯು ನನಗೆ ತಿಳಿದಿದೆ ಎಂದರೆ ಸರಿ. ಈ ಹಂತದಲ್ಲಿ ಸದರಿ ಶಾಲೆಗೆ ಸಂಬಂಧಪಟ್ಟ ಭಾವಚಿತ್ರಗಳನ್ನು ತೋರಿಸಿದು ಅದನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಐದು ಭಾವಚಿತ್ರಗಳನ್ನು ತೋರಿಸಿದು ಅದನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-14 ರಿಂದ 18 ಎಂದು ಹಾಗೂ ಒಂದು C.D ಯನ್ನು ನಿಪಿ-20 ಎಂದು ಗುರುತಿಸಲಾಗಿದೆ. ಕಳೆದ ಬಾರಿ ನನ್ನ ಹೇಳಿಕೆಯಾದ ಬಳಿಕ ಶಾಲೆಯ ಗೋಡೆಗಳ ಮೇಲೆ ಬಣ್ಣವನ್ನು ಬಳಿದು ನಗರಸಭೆ, ತಿಪಟೂರು ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಅದಕ್ಕೆ ಸಂಬಂಧಪಟ್ಟ ಮೂರು ಭಾವಚಿತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-19 ರಿಂದ 21 ಎಂದು ಗುರುತಿಸಲಾಗಿದೆ. ಪ್ರತಿವಾದಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದವರು ಹಿಂದೆ ಇದ್ದಂತಹ ಪ್ರಭುಸ್ವಾಮಿ ಎಂಬುವರು ಎಂದರೆ ಸರಿ. ಅದರಲ್ಲಿ ಇರುವಂತಹ ಅಂಶಗಳು ಸತ್ಯವಾಗಿದೆ ಎಂದರೆ ಸರಿ. ನಿಪಿ-1 ರಂತೆ 1929 ನೇ ಇಸವಿಯಲ್ಲಿ ಸಿಂಗ್ರಿ ನಂಜಪ್ಪ ಎಂಬುವವರು ಶಾಲೆಯನ್ನು ಸರಿಯಾಗಿ ನಡೆಸುತ್ತಿಲ್ಲ, ಆದ ಕಾರಣ ಕಟ್ಟಡವನ್ನು ವಾಪಾಸ್ ಕೊಡಿ ಎಂದು ಪತ್ರ ಬರೆದಿರುತ್ತಾರೆ ಎಂದರೆ ಅದಕ್ಕೆ ನಿಮ್ಮ ಇಲಾಖೆಯವರು ಪ್ರತ್ಯುತ್ತರವನ್ನು ನಿಪಿ-1 ರಂತೆ ನೀಡಿರುತ್ತಾರೆ ಎಂದರೆ ಸರಿ. ನಿಮ್ಮ ಶಾಲೆಯ ಇಲಾಖೆಯವರು ನಾವು ಶಾಲೆಯನ್ನು ಸರಿಯಾಗಿ ನಡೆಸಿಕೊಂಡು ಹೋಗುವಂತೆ ಪತ್ರ ಬರೆದಿದ್ದೆವು ಎಂದರೆ ಸರಿ. ನಿಪಿ-3 ರಂತೆ ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರು ಶಾಲೆಯನ್ನು ಉದ್ಘಾಟನೆ ಮಾಡಿದ್ದಕ್ಕೆ ಪ್ರಶಂಸನಾ ಪತ್ರವನ್ನು ಬರೆದು ಕೊಟ್ಟಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಜಾಗವು ಸರ್ಕಾರದ್ದಲ್ಲ, ಆದರೆ ಶಾಲೆಯು ಸರ್ಕಾರದವರು ನಡೆಸುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಖಾತಾವು ಶಾಲೆಯ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಶಾಲೆಯು ಸರ್ಕಾರಿ ಪ್ರಾಥಮಿಕ ಶಾಲೆಯಲ್ಲ, ಆರ್ಯಬಾಲಿಕಾ ಪಾಠಶಾಲೆ ಆಗಿರುತ್ತದೆ. ಸದರಿ ಶಾಲೆಯು ಹೆಣ್ಣು ಮಕ್ಕಳಿಗಾಗಿ 1 ರಿಂದ 5ನೇ ತರಗತಿಯವರೆಗೂ ಮಾಡಿದಂತಹ

ಶಾಲೆ ಎಂದರೆ ಸರಿ. ಖಾತೆಯಲ್ಲಿ ಇಂದಿಗೂ ಸಹ ಶಾಲೆಯ ಹೆಸರೇ ನಮೂದಾಗಿದೆ ಎಂದರೆ ಸರಿ. ಇಂದಿಗೂ ಸಹ ಖಾತೆಯು ಆರ್ಯಬಾಲಿಕಾ ಪಾಠಶಾಲೆ ಎಂದೆ ಇರುತ್ತದೆ ಎಂದರೆ ಸರಿ. ಸದರಿ ದಾಖಲಾತಿಯನ್ನು ಸಾಕ್ಷಿಗೆ ತೋರಿಸಿದ್ದು ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-22 ಎಂದು ಗುರುತಿಸಲಾಗಿದೆ. ಪ್ರತಿವಾದಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಳಿಕ ಶಾಲೆಯ ಮುಖ್ಯೋಪಾಧ್ಯಾಯರು ತಿಪಟೂರಿನ ನಗರಸಭೆಗೆ ಪತ್ರ ಬರವಣಿಗೆ ಮಾಡಿ ಶಾಲೆಯನ್ನು ನಮ್ಮ ಹೆಸರಿಗೆ ಮಾಡಿ ಕೊಡಿ ಎಂದು ಕೋರಿರುತ್ತಾರೆ ಎಂದರೆ ಸರಿ. 2025 ನೇ ಇಸವಿಯಲ್ಲಿ ಮುಖ್ಯೋಪಾಧ್ಯಾಯರು ಸಿಂಗ್ರಿನಂಜಪ್ಪನವರು ಶಾಲೆಯನ್ನು ನಮಗೆ ದಾನದ ಮುಖಾಂತರ ನೀಡಿದ್ದು ಅದರ ಖಾತೆಯ ಹೆಸರು ನಮ್ಮ ಹೆಸರಿಗೆ ಬದಲಾವಣೆ ಮಾಡಿದ್ದು ಪತ್ರ ಬರೆದಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ದಾಖಲಾತಿ ತೋರಿಸಿದ್ದು ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-23 ಎಂದು ಗುರುತಿಸಲಾಗಿದೆ. 1918ನೇ ಇಸವಿಯಲ್ಲಿ ಶಾಲೆಯು ಪ್ರಾರಂಭಗೊಂಡಿದ್ದು ಅಂದಿನಿಂದ ಇಲ್ಲಿಯವರೆಗೂ ಶಾಲೆಯ ಹೆಸರು ಆರ್ಯಬಾಲಿಕಾ ಪಾಠಶಾಲೆ ಎಂದು ಇಂದಿಗೂ ಸಹ ಖಾತಾದಲ್ಲಿ ಇದೆ ಎಂದರೆ ಸರಿ. ಶಾಲೆ ಆರಂಭವಾದ ಸಮಯದಿಂದ ಇಲ್ಲಿಯವರೆಗೂ ಆರ್ಯಬಾಲಿಕಾ ಪಾಠಾಶಾಲೆಯವರು ಯಾವುದೇ ಕಂದಾಯವನು ಪಾವತಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಪರಿಶೀಲನೆ ಮಾಡಿ ನೋಡಿ ತಿಳಿಸುವುದಾಗಿ ನುಡಿಯುತ್ತಾರೆ. 1918 ನೇ ಸಾಲಿನಿಂದ ಇಲ್ಲಿಯವರೆಗೂ ದಾನ ಕೊಟ್ಟಿರುವ ಬಗ್ಗೆ ದಾನಪತ್ರವು ನೋಂದಣಿಯಾಗಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಸರ್ಕಾರಿ ಜಾಗದಲ್ಲಿ ಶಾಲೆಯನ್ನು ನಡೆಸಿದ್ದಲ್ಲಿ ಅದು ಸರ್ಕಾರಿ ಶಾಲೆ ಆಗುತ್ತದೆ ಎಂದರೆ ಸರಿ. ಖಾಸಗಿ ಜಾಗದಲ್ಲಿ ಶಾಲೆಯನ್ನು ನಡೆಸಿದ್ದಲ್ಲಿ ಅವರ ಕುಟುಂಬದ ವ್ಯಕ್ತಿಯ ಹೆಸರಿನಲ್ಲಿ ಬರುತ್ತದೆ ಎಂದರೆ ಸರಿ. ಈಗ ಶಾಲೆಯಲ್ಲಿ 5 ತರಗತಿಗಳಿದ್ದು ಅದರಲ್ಲಿ 5 ಮಕ್ಕಳಿರುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಸದರಿ ತರಗತಿಗಳಲ್ಲಿ ಎಷ್ಟು ಜನ ಮಕ್ಕಳಿದ್ದಾರೆ ಎಂಬುದರ ಪಟ್ಟಿಯನ್ನು ತೋರಿಸಿದ್ದು ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲಾತಿಗಳನ್ನು ಒಟ್ಟಾಗಿ ನಿಪಿ-24 ಎಂದು ಗುರುತಿಸಲಾಗಿದೆ. ನಿಪಿ-24 ರಲ್ಲಿ ತೋರಿಸಿದಂತೆ ವಿದ್ಯಾರ್ಥಿಗಳ ಸಂಖ್ಯೆಯು ಎಷ್ಟು ವರ್ಷದಿಂದ ಈ ರೀತಿ ಇದೆ ಎಂದರೆ ಸಾಕ್ಷಿಯು ಅದನ್ನು ಪರಿಶೀಲನೆ ಮಾಡಿ ನೋಡಿ ಹೇಳಬೇಕು ಎಂದು ನುಡಿಯುತ್ತಾರೆ. ಸದರಿ ಶಾಲೆಯನ್ನು ಪೊಲೀಸ್ ಇಲಾಖೆಯವರು ಉಪಯೋಗಿಸಿಕೊಂಡು ಎಲ್ಲಾ ಅಮಾನತ್ತುಪಡಿಸಿದ ವಾಹನಗಳನ್ನು ಅಲ್ಲಿ ಹಾಕಿರುವುದಾಗಿ ಕೇಳಿದಾಗ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಗೆ 2 ತಿಂಗಳ ಹಿಂದೆ ಭೇಟಿ ನೀಡಿದ್ದೆ. ನಾನು ಹೋಗಿದ್ದಂತಹ ಸಮಯದಲ್ಲಿ ಮೇಲೆ ಹೇಳಿರುವ ಹಾಗೇ

ಯಾವುದೇ ಪೊಲೀಸ್ ಇಲಾಖೆಗೆ ಸಂಬಂಧಪಟ್ಟ ಜಪ್ತುಪಡಿಸಿದ ವಾಹನಗಳು ಇರಲಿಲ್ಲ. ಸದರಿ ಶಾಲೆಗೆ ಒಂದು ಕಾಂಪೌಂಡ್ ಇದ್ದು ಅದರ ದಕ್ಷಿಣ ಭಾಗಕ್ಕೆ ರಸ್ತೆ, ಟೌನ್ ಪೊಲೀಸ್ ಠಾಣೆ ಇದೆ ಎಂದರೆ ಸರಿ. ಸದರಿ ಪೊಲೀಸ್ ಠಾಣೆಯವರು ದಕ್ಷಿಣ ಭಾಗದಲ್ಲಿರುವ ಕಾಂಪೌಂಡ್ ನ್ನು ಹೊಡೆದು ಹಾಕಿರುವ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದು ಕೇಳಿದಾಗ ರಸ್ತೆಯ ಪಕ್ಕದಲ್ಲಿ ಕಾಂಪೌಂಡ್ ಇರುವುದಾಗಿ ನುಡಿಯುತ್ತಾರೆ. ನನ್ನ ಇಂದಿನ ಹೇಳಿಕೆ ಮುಗಿದ ಬಳಿಕ ಶಾಲೆಯ ದಕ್ಷಿಣ ಭಾಗದಲ್ಲಿ ಇದೆಯೋ ಇಲ್ಲವೋ ಎಂಬುದನ್ನು ಹೋಗಿ ನೋಡಿರುವುದಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ದಕ್ಷಿಣ ಭಾಗದ ಭಾವಚಿತ್ರವನ್ನು ತೋರಿಸಿದ್ದು ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-25 ಎಂದು ಗುರುತಿಸಲಾಗಿದೆ. ದಾವಾ ಆಸ್ತಿಯ ಪಶ್ಚಿಮ ಭಾಗಕ್ಕೆ ನಗರಸಭೆಯ ಜಾಗವಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅರಳೀ ಮರವಿದ್ದು ಅದರ ಮುಂಭಾಗಕ್ಕೆ ನಗರಸಭೆಗೆ ಸೇರಿದ ಜಾಗವಿರುವುದಾಗಿ ನುಡಿಯುತ್ತಾರೆ. ಸದರಿ ಶಾಲೆಯಲ್ಲಿ ಮಕ್ಕಳಿದ್ದು ಪಕ್ಕದಲ್ಲಿ ರಸ್ತೆ ಇರುವ ಕಾರಣ ಅದಕ್ಕೆ ಕಾಂಪೌಂಡ್ ನ್ನು ಹಾಕಬೇಕು ಎಂದು ತಿಳಿಸಿ ನಗರಸಭೆಯಿಂದ ಆರ್ಯಬಾಲಿಕಾ ಪಾಠಾಶಾಲೆಗೆ ಮಂಜೂರಾತಿ ಸಹ ಆಗಿರುತ್ತದೆ. ಸದರಿ ಮಂಜೂರಾತಿಯ ಪತ್ರವನ್ನು ತೋರಿಸಿದ್ದ ಅದನ್ನು ಸಾಕ್ಷಿಯು ಗುರುತಿಸಿರುತ್ತಾರೆ, ಅದನ್ನು ನಿಪಿ-26 ಎಂದು ಗುರುತಿಸಲಾಗಿದೆ. ನಿಮ್ಮ ಶಾಲೆಯಿಂದ ಒಂದು ಅಂಗನವಾಡಿಯನ್ನು ನಡೆಸಲು ಅನುಮತಿ ಕೇಳಿದ್ದು ಅದಕ್ಕೆ ಅನುಮತಿಯನ್ನೂ ಸಹ ಪಡೆದುಕೊಂಡು ದಾವಾ ಆಸ್ತಿಯಲ್ಲಿ ಈಗ ಅಂಗನವಾಡಿಯನ್ನು ನಡೆಸುತ್ತಿದ್ದೀರಿ ಎಂದರೆ ಸರಿ. ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ತೋರಿಸಿದ್ದು ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-27 ಎಂದು ಗುರುತಿಸಲಾಗಿದೆ. 2018ನೇ ಇಸವಿಯಲ್ಲಿ ನಾಳಬಂದವಾಡಿ ರಸ್ತೆಯಲ್ಲಿ ಅಂಗನವಾಡಿಯನ್ನು ನಡೆಸುತ್ತಿದ್ದೇವೆ ಎಂದು ಹೇಳಿ ಒಂದು ಪತ್ರವನ್ನು ಬರೆಸಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಇಂದಿಗೆ ನಾಳಬಂದವಾಡಿ ರಸ್ತೆಗೆ ಅಂಗನವಾಡಿ ಸ್ಥಳಾಂತರವಾಗಿದೆಯೋ ಇಲ್ಲವೋ ಎಂಬುದರ ಬಗ್ಗೆ ನನಗೆ ತಿಳಿದಿಲ್ಲ. ನಾನು ಈ ಹಿಂದೆ ಹೇಳಿರುವ ಹಾಗೇ ದಾವಾ ಆಸ್ತಿಯಲ್ಲಿ ಐದು ಮಕ್ಕಳು ಇರುವ ಶಾಲೆಗಳು ಮಾತ್ರ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 1 ½ ತಿಂಗಳ ಹಿಂದೆ ನಾನು ಭೇಟಿಯನ್ನು ನೀಡಿದಂತಹ ಸಮಯದಲ್ಲಿ ಅಂಗನವಾಡಿ ಇತ್ತು ಎಂದು ನುಡಿಯುತ್ತಾರೆ. ಶಾಲೆಯ ಉತ್ತರ ಭಾಗದಲ್ಲಿ NH ರಸ್ತೆಗೆಂದು ಭೂಪರಿವರ್ತನೆ ಆಗಿದೆ ಎಂದರೆ ಸರಿ. ಆ ಸಮಯದಲ್ಲಿ ಆರ್ಯ ಬಾಲಿಕಾ ಪಾಠ ಶಾಲೆಗೆ ಪರಿಹಾರವನ್ನು ಸಹ ನೀಡಿರುತ್ತಾರೆ ಎಂದರೆ ಸರಿ. ಈ ಸದರಿ ದಾಖಲಾತಿಗಳನ್ನು ಒಟ್ಟಾಗಿ ನಿಪಿ-28 ಎಂದು ಗುರುತಿಸಲಾಗಿದೆ. ಸಿಂಗ್ರಿ

ನಂಜಪ್ಪನವರ ಕುಟುಂಬದವರು ಈ ದಾವೆಯಲ್ಲಿ ಏನು ಪರಿಹಾರ ಕೇಳಿ ಹೂಡಿದ್ದಾರೆ ಎಂಬುದು ನನಗೆ ತಿಳಿದಿದೆ. ಆರ್ಯ ಬಾಲಿಕಾ ಪಾಠಶಾಲೆಯಲ್ಲಿ 5 ಹೆಣ್ಣು ಮಕ್ಕಳಿಗೆ ಸೇರಿದಂತಹ ಶಾಲೆ ನಡೆಯುತ್ತಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕೋ ಎಜುಕೇಷನ್ ಶಾಲೆಯಾಗಿದೆ ಎಂದು ನುಡಿಯುತ್ತಾರೆ. ನಾನು ಆ ಎಲ್ಲಾ ಶಾಲೆಗಳಿಗೂ ಭೇಟಿ ನೀಡಿರುತ್ತೇನೆ. ಇಂದಿಗೂ ಸಹ ಆ ಎಲ್ಲಾ ಶಾಲೆಗಳು ನಡೆಯುತ್ತಿದ್ದು ಅದರಂತೆ ದಾಖಲಾತಿಯು ಇರುತ್ತದೆ ಎಂದರೆ ಸರಿ. ಆರ್ಯ ಬಾಲಿಕಾ ಪಾಠಶಾಲೆಯಲ್ಲಿ ಮಕ್ಕಳ ದಾಖಲಾತಿ ಯಾಕೆ ಕಡಿಮೆ ಇದೆ ಎಂದು ಕೇಳಿದಾಗ ಸಾಕ್ಷಿಯು ಇಂಗ್ಲೀಷ್ ಮಾಧ್ಯಮ ಇಲ್ಲ ಎಂಬ ಕಾರಣದಿಂದ ಇರಬಹುದು ಎಂದು ನುಡಿಯುತ್ತಾರೆ. ಕರ್ನಾಟಕದಲ್ಲಿ ಸುಮಾರು 7 ಸಾವಿರ ಸರ್ಕಾರಿ ಶಾಲೆಗಳು ನಿಂತು ಹೋಗಿರುತ್ತೆ ಎಂದರೆ ನನಗೆ ಗೊತ್ತಿಲ್ಲ. ತಿಪಟೂರಿನಲ್ಲಿ ಕಳೆದ ಬಾರಿಗೆ ಸುಮಾರು 14 ಸರ್ಕಾರಿ ಶಾಲೆಗಳು ನಿಂತು ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು 6 ವರ್ಷದಲ್ಲಿ ನಿಂತು ಹೋಗಿರುತ್ತದೆ ಎಂದು ನುಡಿಯುತ್ತಾರೆ. ತಿಪಟೂರಿನಲ್ಲಿ ಶಾಲೆಗಳು ನಿಂತು ಹೋಗಿರುವ ಶಾಲೆಗಳು ನಮ್ಮ ಇಲಾಖೆಗೆ ಬರುತ್ತದೆ ಎಂದರೆ ಸರಿ. ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-29 ಎಂದು ಗುರುತಿಸಲಾಗಿದೆ. ಕಟ್ಟಡ ಸರಿಯಿಲ್ಲದ ಕಾರಣ, ಶಿಕ್ಷಕರ ಕೊರತೆ ಇರುವ ಕಾರಣದಿಂದ ನಿಮ್ಮ ಶಾಲೆಯು ನಿಂತು ಹೋಗಿರುತ್ತದ ಎಂದರೆ ಸರಿಯಲ್ಲ. ತಿಪಟೂರಿನಲ್ಲಿ 14 ಸರ್ಕಾರಿ ಶಾಲೆಗಳು ನಿಂತು ಹೋಗಿರುವುದು ಇಂಗ್ಲೀಷ್ ಮಾಧ್ಯಮ ಇಲ್ಲ ಎಂಬ ಕಾರಣಕ್ಕೆ ಎಂದು ನುಡಿಯುತ್ತಾರೆ. ಆರ್ಯ ಬಾಲಿಕಾ ಪಾಠಶಾಲೆಯು ಕನ್ನಡ ಮಾಧ್ಯಮವಾಗಿದ್ದು ಅದು 5 ವಿದ್ಯಾರ್ಥಿಗಳಿಗೆ ಬಂದು ನಿಂತು ಹೋಗಿದೆ ಎಂದರೆ ಸರಿ. 1918 ನೇ ಇಸವಿಯಿಂದ ಇಲ್ಲಿಯವರೆಗೂ ಆರ್ಯ ಬಾಲಿಕಾ ಪಾಠಶಾಲೆಯು ಕೇವಲ ಹೆಣ್ಣು ಮಕ್ಕಳಿಗೆಂದು ಆರಂಭವಾಗಿರುತ್ತದೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಕೇವಲ ಹೆಣ್ಣು ಮಕ್ಕಳಿಗೆ ಇದ್ದು ಈಗ Co-Ed ಆಗಿರುತ್ತದೆ ಎಂದು ನುಡಿಯುತ್ತಾರೆ. ಅದು ಯಾವ ಇಸವಿಯಲ್ಲಿ Co-Ed ಆಗಿರುತ್ತದೆ ಎಂದು ಗೊತ್ತಿಲ್ಲ. ನಾನು ಬಂದ ಸಮಯದಿಂದಲೂ ಶಾಲೆಗೆ ಮಕ್ಕಳನ್ನು ಸೇರಿಸುವುದಕ್ಕೆ ಹಾಗೂ ಶಾಲೆಯನ್ನು ಅಭಿವೃದ್ಧಿ ಮಾಡುವ ಪ್ರಯತ್ನ ಮಾಡುತ್ತಿದ್ದೇನೆ. ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರದಿಂದ ಹಣ ಬರಬೇಕು ಎಂದರೆ ಸರಿ. ಸರ್ಕಾರದಿಂದ ನಮ್ಮ ಶಾಲೆಯನ್ನು ನಡೆಸುವುದಕ್ಕೆ ಎಷ್ಟು ಹಣ release ಆಗಿದೆ ಎಂದು ನಾನು ಪರಿಶೀಲನೆ ಮಾಡಬೇಕು ಎಂದು ನುಡಿಯುತ್ತಾರೆ. ಸಿಂಗ್ರಿ ನಂಜಪ್ಪನವರ ಕುಟುಂಬಸ್ಥರು ಹೇಳುವ ಹಾಗೇ ಶಾಲೆಯು ನಿಂತು ಹೋಗಿದ್ದು ಶಾಲೆಯ ಒಳಗಡೆ ಅನೈತಿಕ ಚಟುವಟಿಕೆಗಳು ನಡೆಯುತ್ತಿದೆ ಎಂದರೆ ಸರಿಯಲ್ಲ. ಸಿಂಗ್ರಿ

ನಂಜಪ್ಪನವರ ಕುಟುಂಬದವರು ಈ ಶಾಲೆಯನ್ನು ನಡೆಸಲು ನಿಮಗೇನಾದರೂ ತೊಂದರೆ ಇದೆಯಾ ಎಂದರೆ ಸಾಕ್ಷಿಯು ಅದು ಸರ್ಕಾರಿ ಶಾಲೆ ಅದನ್ನು ನಡೆಸಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸರ್ಕಾರಿ ಶಾಲೆ ಎಂದರೆ ಸರ್ಕಾರದವರ ಜಾಗ ಹಾಗೂ ಅದಕ್ಕೆ ಅನುಮತಿ ಬೇಕಾಗುತ್ತದೆ ಎಂದರೆ ಸರಿ. ಈ ದಾವೆಯಲ್ಲಿ ಸಿಂಗ್ರಿ ನಂಜಪ್ಪನವರ ಕುಟುಂಬಸ್ಥರು ಶಾಲೆಯು ನಿಂತು ಹೋಗಿರುವ ಕಾರಣ ಹಾಗೂ ಜಾಗ ಅವರದ್ದಾಗಿರುವ ಕಾರಣ ಅವರು ನಡೆಸಲು ಕೇಳುತ್ತಿದ್ದಾರೆ ಎಂದರೆ ಸರಿ. ದಾವಾ ಹಾಕುವ ಮುನ್ನ ಸದರಿ ವಿಷಯವನ್ನು ಅವರು ನಿಮ್ಮ Chief ರವರಿಗೂ ನಿಪಿ-11 ರಂತೆ ಸಹ ಕೇಳಿರುತ್ತಾರೆ ಎಂದರೆ ಸರಿ. 2013 ರಿಂದ ಇಲ್ಲಿಯವರೆಗೂ ನೀವು ಯಾವುದೇ ರೀತಿಯ ಕ್ರಮವನ್ನು ಕೈಗೊಂಡಿರುವುದಿಲ್ಲ ಎಂದರೆ ನಾನು ಬಂದ ಮೇಲೆ ಮಾಡಿರುವುದಿಲ್ಲ, ಹಿಂದೆ ಏನಾಗಿದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಬಂದ ಬಳಿಕ ಈ ಹಿಂದೆ ಏನೆಲ್ಲಾ ವ್ಯವಹಾರಗಳು ನಡೆದಿದೆ ಎಂಬ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ ಎಂದರೆ ಸರಿ. ನಮ್ಮ ಇಲಾಖೆಯಿಂದ ತಿಪಟೂರು ನಗರ ಪೊಲೀಸ್ ಠಾಣೆಗೆ ಯಾವುದಾದರೂ ನೋಟೀಸನ್ನು ನೀಡಿದ್ದರ ಎಂಬುದರ ಬಗ್ಗೆ ನಾನು ಪರಿಶೀಲನೆ ಮಾಡಿ ನೋಡಬೇಕು. ನಿಮ್ಮ ವಿಚಾರಣೆ ಕಳೆದ ಬಾರಿ ಆದ ಬಳಿಕ ತಿಪಟೂರಿನ ನಗರ ಪೊಲೀಸ್ ಠಾಣೆಯವರು ಜಪ್ತಿಯಾದ ವಾಹನಗಳನ್ನು ಶಾಲಾ ಆವರಣದಲ್ಲಿ ನಿಲ್ಲಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ವಿಚಾರಣೆಯಾದ ಬಳಿಕ ನಗರಸಭೆಯವರು ತಿಳಿಸಿ ಉತ್ತರ ಭಾಗದಲ್ಲಿ ಶಾಲೆಯ ಕಟ್ಟಡಕ್ಕೆ ಬಣ್ಣವನ್ನು ಹೊಡೆಸಿರುತ್ತಾರೆ ಎಂದರೆ ಸರಿ. ಸರ್ಕಾರದ ಅಸಂಬದ್ಧತೆಯಿಂದ ಶಾಲೆಯು ನಿಂತು ಹೋಗಿರುತ್ತದೆ ಎಂದರೆ ಸರಿಯಲ್ಲ. ಕಟ್ಟಡವನ್ನು ರಿಪೇರಿ ಮಾಡಿಸುವುದಕ್ಕೂ ಸರ್ಕಾರದಿಂದ ಹಣ ನೀಡಬೇಕು ಎಂದರೆ ಸರಿ. ಬಹಳಷ್ಟು NGO ಗಳು ಸರ್ಕಾರದ ಶಾಲೆಯಿಂದ ದತ್ತು ತೆಗೆದುಕೊಳ್ಳುವ ವಿಷಯ ನನಗೆ ತಿಳಿದಿದೆ ಎಂದರೆ ಸರಿ. ಸದರಿ ಶಾಲೆಯು Public Toilet ಆಗಿದೆ ಎಂದರೆ ಸರಿಯಲ್ಲ. ಯಾವ ಕಾರಣದಿಂದ ಕಟ್ಟಡ ಹಾಳಾಗಿದೆ ಹಾಗೂ ವಿದ್ಯಾರ್ಥಿಗಳು ಶಾಲೆಗೆ ಬರುತ್ತಿಲ್ಲ ಎಂಬ ಖುದ್ದು ಮಾಹಿತಿ ನಿನಗಿದೆ ಎಂದರೆ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಹೇಳುವ ಹಾಗೇ ಶಾಲೆಯ ½ ಭಾಗವು ಚೆನ್ನಾಗಿರುತ್ತದೆ, ಇನ್ನರ್ಧ ಭಾಗವು ಹಾಳಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸರ್ಕಾರಿ ಶಾಲೆಯನ್ನು NGO ರವರು ನಡೆಸುತ್ತಾರೆ ಎಂದು ಕೇಳಿದರೆ ಶಾಲೆಯನ್ನು ಕೊಡುತ್ತಾರೆ ಎಂದರೆ ಸಾಕ್ಷಿಯು ಶಾಲೆಯನ್ನು ನಡೆಸಲು ಕೊಡುವುದಿಲ್ಲ, ಆದರೆ ಅದರ ಅಭಿವೃದ್ಧಿಗೆ ನೀಡುತ್ತಾರೆ ಎಂದು ನುಡಿಯುತ್ತಾರೆ. ಅದರಂತೆ ಸಿಂಗ್ರಿ ನಂಜಪ್ಪನವರ ಆರ್ಯ ಬಾಲಿಕಾ ಪಾಠಶಾಲೆಯಲ್ಲಿ ಯಾವುದೇ ಪ್ರಕ್ರಿಯೇ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಇಲಾಖೆಯ

process ನ ಪ್ರಕಾರ ಅರ್ಜಿ ಸಲ್ಲಿಸಿದ್ದಲಿ ಅದರಂತೆ ನೀಡಬಹುದು ಎಂದು ನುಡಿಯುತ್ತಾರೆ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**